ಹಿರಿಯ ಸಿವಿಲ್ ನ್ಯಾಯಾಧೀಶರಿವರ ನ್ಯಾಯಾಲಯ, ಕೊಡಗು ಮಡಿಕೇರಿ.

ಓ. ಎಸ್. ನಂಬರ಼್ 16/2020

ಸಿ ಡಬ್ಲ್ಯು಼ 1

| | |
|---|---|
| ಸಾಕ್ಷಿದಾರರ ಹೆಸರು | ಎಸ್.ಎಲ್.ಮಹೇಶ್ ಕುಮಾರ |
| ತಂದೆಯ ಹೆಸರು | ಆರ್.ಲಿಂಗರಾಜ |
| ಪ್ರಾಯ | **55** ವರ್ಷ |
| ಉದ್ಯೋಗ | ಎ.ಡಿ.ಎಲ್.ಆರ್ ಮಡಿಕೇರಿ |
| ವಾಸಸ್ಥಳ | ಮಡಿಕೇರಿ |

**ದಿ಼17.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ಼ ಸಾಕ್ಷಿ ಸ್ವತ಼**

ನಾನು ದಿ಼04.10.2024 ರಿಂದ ಮಡಿಕೇರಿ ಭೂ ದಾಖಲೆಗಳ ಸಹಾಯ ನಿರ್ದೇಶಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ದಾವೆಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಿಂದ ಕರ್ಣಂಗೇರಿ ಗ್ರಾಮ ಸರ್ವೆ ನಂ.135/1ರ ಆಸ್ತಿಯನ್ನು ಅಳತೆ ಮಾಡಿ ವರದಿ ಸಲ್ಲಿಸುವಂತೆ ಮಾನ್ಯ ನ್ಯಾಯಾಲಯ ನನಗೆ ನಿರ್ದೇಶಿದ ಮೇರೆಗೆ ಆದೇಶವನ್ನು ದಿ಼03.12.2024 ರಂದು ಸ್ವೀಕರಿಸಿದೆ. ದಿ಼29.07.2025 ರಂದು ಅಳತೆಗೆ ದಿನಾಂಕ ನಿಖಧಿ ಮಾಡಿ ಪೂರ್ವಭಾವಿಯಾಗಿ ಉಭಯ ಪಕ್ಷಗಾರರರಿಗೆ ಮತ್ತು ವಕೀಲರಿಗೆ ದಿ಼15.07.2025 ರಂದು ನೋಟೀಸ್ಸು ಕೊಟ್ಟೆ ಉಭಯ ಪಕ್ಷಗಾರರಿಗೆ ನೋಂದಾಯಿತ ಅಂಚೆ

ಮುಖಾಂತರ ನೋಟಸೀಸ್ಸು ಕಳುಹಿಸಿದೆ. ಉಭಯ ಪಕ್ಷಗಾರಿಗೆ ನಾನು ಕಳುಹಿಸಿದ್ದ ನೋಟೀಸ್ಸು ಜಾರಿಯಾಗಿತ್ತು. ದಿಃ15.07.2025 ರಂದು ಮಡಿಕೇರಿ ಗ್ರಾಮಾಂತರ ಪೊಲೀಸರಿಗೆ ಅಳತೆ ಕಾರ್ಯಕ್ಕೆ ಭದ್ರತೆ ಒದಗಿಸುವಂತೆ ಮನವಿ ಕೊಟ್ಟಿದ್ದೇನೆ. ಸ್ಥಳಕ್ಕೆ ಹೋದಾಗ ಗ್ರಾಮ ನಕಾಶೆ, ಸರ್ವೆ ನಂ.135/1 ರ ಮೂಲ ಪಿಟಿ ಶೀಟ್ ಗಳನ್ನು ತೆಗೆದುಕೊಂಡು ಹೊಗಿದ್ದೇವು. ನನ್ನ ಜೊತೆ ಅಳತೆ ಕಾರ್ಯಕ್ಕೆ ನನ್ನ ಸಿಬ್ಬಂದಿಗಳಾದ ಸುರೇಶ್ ಮತ್ತು ಮಹೇಂದ್ರ ಬಂದಿದ್ದರು. ನಾವು ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಗಳು ಇದ್ದರು. ಉಭಯ ಪಕ್ಷಗಾರರು ಸಹ ಸ್ಥಳದಲ್ಲಿ ಹಾಜರು ಇದ್ದರು. ವಾರೆಂಟ್ ಜೊತೆ ಉಭಯ ಪಕ್ಷಗಾರರು ಸಲ್ಲಿಸಿದ್ದ ಸೂಚನಾ ಪಟ್ಟಿ ಸಹ ಬಂದಿತ್ತು. ಸರ್ವೆ ನಂ.135/3 ಮತ್ತು ಸರ್ವೆ ನಂ.135/4 ರ ಆಸ್ತಿಗಳು ದುರಸ್ಥಿ ಆಗಿದ್ದವು. ಅದರ ಆಧಾರದ ಮೇಲೆ ಸರ್ವೆ ನಂ.135/1 ನ್ನು ಗುರುತಿಸಿ ಅಳತೆ ಮಾಡಿದೇವು. ಮಾನ್ಯ ನ್ಯಾಯಾಲಯದ ನಿರ್ದೇಶದಂತೆ ಮತ್ತು ಉಭಯ ಪಕ್ಷಗಾರರು ಸಲ್ಲಿಸಿದ್ದ ಸೂಚನಾ ಪಟ್ಟಿಯಂತೆ ಅಳತೆ ಕಾರ್ಯ ನಿರ್ವಹಿಸಿದೆ. ಈ ಸಂಬಂಧ ಸ್ಥಳದಲ್ಲಿ ಹೇಳಿಕೆಯನ್ನು ಪಡೆದು ಅದರ ಮೇಲೆ ವಾದಿ ಪ್ರತಿವಾದಿಗಳ ಮತ್ತು ಗ್ರಾಮಸ್ಥರ ಹಾಗೂ ಪೊಲೀಸರ ಸಹಿ ಪಡೆದಿದ್ದೇನೆ. ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಸಾಕ್ಷಿಗೆ ವರದಿ, ಪೊಲೀಸರಿಗೆ ನೀಡಿದ ವರದಿ, ಹೇಳಿಕೆ, ನೋಟೀಸ್ಸು, ಆರ್ ಟಿ ಸಿ, 14 ಫೋಟೊಗಳು ಮತ್ತು ಪಿಟಿ ಶೀಟ್ ನ್ನು ಹಾಜರು ಮಾಡಿದ್ದು ಅವುಗಳನ್ನು ನೋಡಿ ಗುರುತಿಸಿದ್ದೇನೆ. ಅವುಗಳನ್ನು ನಿಸಿ.1 ರಿಂದ 20 ಎಂದು ಗುರುತಿಸಿದ್ದೇನೆ.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರಿ.ಎಂ.ಎಸ್.ಎನ್ ವಕೀಲರಿಂದಃ**

ಸರ್ವೆ ನಂ.135/3 ಮತ್ತು 135/4 ನ್ನು ಖಾಯಂ ಇಟ್ಟು ಸರ್ವೆ ನಂ.135/1 ನ್ನು ಅಳತೆ ಮಾಡುವ ಮೊದಲು ಸರ್ವೆ ನಂ.135/3 ಮತ್ತು 135/4 ರ ಆಸ್ತಿಗಳನ್ನು ಮೊದಲು ಗುರುತಿಸಿಕೊಳ್ಳಬೇಕು ಎಂದರೆ ಸರಿ. ಸರ್ವೆ ನಂ.135/3 ಮತ್ತು 135/4 ರ ಆಸ್ತಿಗಳನ್ನು ಗುರುತಿಸಿದ ಬಗ್ಗೆ ವರದಿಯಲ್ಲಾಗಲಿ ಅಥವಾ ಪಿಟಿ ಶೀಟಿನಲ್ಲಿ ಆಗಲಿ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ಪಿಟಿ ಶೀಟಿನಲ್ಲಿ ಮತ್ತು ವರದಿಯಲ್ಲಿ ನಮೂದು ಮಾಡಿಲ್ಲ ಎನ್ನುತ್ತಾರೆ. ನಿಶಿ.20 ರ ಪಿಟಿಶೀಟ್ ನ್ನು ನಾನು ಸ್ಥಳದಲ್ಲೆ ತಯಾರಿಸಿದ್ದೇನೆ. ಅಳತೆ ಕಾಲಕ್ಕೆ ಸರ್ವೆ ನಂ.135/3 ಮತ್ತು 135/4 ರ ಆಸ್ತಿಗಳನ್ನು ಗುರುತಿಸದೇ ಪಿಟಿಶೀಟ್ ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಆಸ್ತಿಯ ಗಡಿ ಗುರುತನ್ನು ಮಾಡುವ ಕಾಲಕ್ಕೆ ಖಾಯಂ ಬಾಂದುಗಲ್ಲುಗಳನ್ನು ಆಧಾರವಾಗಿ ಇಟ್ಟುಕೊಂಡು ಅಳತೆ ಕಾರ್ಯ ಮಾಡಿದೆ ಅಳತೆ ಖಚಿತ ಆಗುತ್ತದೆ ಎಂದರೆ ಸರಿ. ನಿಸಿ.20 ರ ಪಿಟಿಶೀಟ್ ನಲ್ಲಿ ಸರ್ವೆ ನಂ.135/3 ಮತ್ತು 135/4 ರ ಆಸ್ತಿಗಳನ್ನು ಗುರುತಿಸಲು ಖಾಯಂ ಗಡಿ ಗುರುತುಗಳನ್ನು ಗುರುತಿಸಿದ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿಗಳು ಈಗಾಗಲೇ ದುರಸ್ಥಿ ಆಗಿದ್ದರಿಂದ ಅವುಗಳನ್ನು ಖಾಯಂ ಮಾಡಿಕೊಂಡು ಸರ್ವೆ ನಂ135/1 ನ್ನು ಅಳತೆ ಕಾರ್ಯ ಮಾಡಿದ್ದೇನೆ ಎನ್ನುತ್ತಾರೆ. ಖಾಯಂ ಬಾಂದುಗಲ್ಲುಗಳನ್ನು ಗುರುತಿಸಿಕೊಳ್ಳದೇ ಸರ್ವೆ ನಂ.135/3 ಮತ್ತು 135/4 ರ ಆಧಾರದ ಮೇಲೆ ಸರ್ವೆ ನಂ.135/1 ರ ಅಳತೆ ಕಾರ್ಯ ಸಕ್ಷಮ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಗಾಗಲೇ ದುರಸ್ಥಿ ಆಗಿರುವ ಆಸ್ತಿಯನ್ನು ಖಾಯಂ

ಇಟ್ಟು ಅಳತೆ ಕಾರ್ಯ ಮಾಡಿದರೆ ತಪ್ಪುಗಳು ಆಗುವುದಿಲ್ಲ ಆದ್ದರಿಂದ ಅದೇ ನಿಯಮವನ್ನು ಪಾಲನೆ ಮಾಡಿದ್ದೇನೆ ಎನ್ನುತ್ತಾರೆ. ಆ ರೀತಿ ಪ್ರಕ್ರಿಯೆ ಪಾಲನೆ ನಿಯಮಬದ್ಧ ಅಲ್ಲ ಎಂದರೆ ಸರಿಯಲ್ಲ. ನಿಸಿ.1 ರಲ್ಲಿ ತೋರಿಸಿರುವಂತೆ ದಾವಾ ಸ್ವತ್ತನ್ನು ನೇರಳೆ, ಹಸಿರು ಮತ್ತು ಹಳದಿ ಬಣ್ಣದಿಂದ ತೋರಿಸಿದ್ದೇನೆ. ನಿಸಿ.1 ರಲ್ಲಿ ತೋರಿಸಿದಂತೆ ಹಳದಿ ಬಣ್ಣದಿಂದ ತೋರಿಸಿರುವ ಜಾಗದಲ್ಲಿ ನಾನು ಕಲೆ ಹಾಕಿ ಮಾಹಿತಿ ಪ್ರಕಾರ ಪ್ರೇಮಾ ಎಂಬುವವರು ಸ್ವಾಧೀನದಲ್ಲಿ ಇದ್ದಾರೆ. ಸ್ಥಳದಲ್ಲಿ ಮಾಹಿತಿ ಸಿಕ್ಕ ಪ್ರಕಾರ ಸದರಿ ಜಾಗದಲ್ಲಿ ಪ್ರೇಮಾ ಇವರು ಸ್ವಾಧೀನದಲ್ಲಿ ಇದ್ದಾರೆ. ಪ್ರೇಮಾ ಇವರು ಸ್ಥಳದಲ್ಲಿ ಹಾಜರು ಇರಲಿಲ್ಲ. ಸ್ಥಳದಲ್ಲಿ ಹಾಜರು ಇದ್ದವರು ಪ್ರೇಮಾ ಎಂಬುವವರು ಸದರಿ ಆಸ್ತಿಯನ್ನು ಸ್ವಾಧೀನ ಹೊಂದಿದ್ದಾರೆ ಎಂದು ಮಾಹಿತಿ ತಿಳಿಸಿದ್ದಾರೆ. ಹಿಸಿರು ಬಣ್ಣದಿಂದ ಗುರುತಿಸಿರುವ ಜಾಗದಲ್ಲಿ ಪ್ರತಿವಾದಿಗಳ ಮನೆ ಇದೆ ಎಂದರೆ ಸರಿ. ಪ್ರತಿವಾದಿಗಳು ವಾಸ ಮಾಡುತ್ತಿರುವ ಮನೆ ನಾನು ಹಾಜರು ಮಾಡಿರುವ ಫೋಟೊದಲ್ಲಿ ಕಂಡುಬರುತ್ತದೆ ಎಂದರೆ ಸರಿ. ಪ್ರತಿವಾದಿಗಳ ಮನೆ 2.50 ಸೆಂಟ್ಸ್ ವಿಸ್ತೀರ್ಣದಲ್ಲಿ ಇದೆ. ಪ್ರತಿವಾದಿಗಳು ವಾಸ ಮಾಡುತ್ತಿರುವ ಮನೆಯ ಉದ್ದ ಮತ್ತು ಅಗಲದ ಅಳತೆ ಗೊತ್ತಿಲ್ಲ. ವರದಿಯಲ್ಲಿ ಪ್ರತಿವಾದಿಗಳ ವಾಸದ ಮನೆ ಉದ್ದ ಅಗಲದ ಅಳತೆಯನ್ನು ನಮೂದು ಮಾಡಲು ನನಗೇನೂ ತೊಂದರೆ ಇರಲಿಲ್ಲ. ನೇರಳೆ ಬಣ್ಣದಿಂದ ತೋರಿಸಿರುವ ಜಾಗದಲ್ಲಿ ಕಾಫಿ ಇದೆ ಎಂದರೆ ಸರಿ. ನೇರಳೆ ಬಣ್ಣದ ಸುತ್ತ ಅಂಚಿನಲ್ಲಿ ಬೇಲಿ ಇದೆ ಎಂದರೆ ಸರಿ. ನೇರಳೆ ಬಣ್ಣದಿಂದ ತೋರಿಸುವ ಜಾಗದಲ್ಲಿ ಪ್ರತಿವಾದಿಗಳು ಕಾಫಿ ಬೆಳೆದಿದ್ದಾರೆ ಎಂದರೆ ಸಾಕ್ಷಿ ಯಾರು ಬೆಳೆದಿದ್ದಾರೆ ಗೊತ್ತಿಲ್ಲ ಅಲ್ಲಿ ಕಾಫಿ ಇದೆ ಎನ್ನುತ್ತಾರೆ. ಹಸಿರು ಬಣ್ಣದಿಂದ ತೋರಿಸಿರುವ ಜಾಗದಲ್ಲಿ ಇರುವ ಮನೆ ಸುತ್ತ ಬೇಲಿ ಇಲ್ಲ ಎಂದರೆ ಸರಿ.

ನನ್ನ ವರದಿಯ 8ನೇ ಖಂಡಿಕೆಯನ್ನು ವಾದಿಯವರ ಹೇಳಿದ್ದರಿಂದ ಬರೆದಿದ್ದೇನೆ ಎಂದರೆ ಸರಿ. 8ನೇ ಖಂಡಿಕೆಯ ವಿವರನ್ನು ವಾದಿ ಸ್ಥಳದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧ ಪ್ರತಿವಾದಿಗಳ ಬಳಿ ವಿಚಾರಣೆ ಮಾಡಿಲ್ಲ. ನನ್ನ ವರದಿಯ 8ನೇ ಖಂಡಿಕೆಯನ್ನು ವಾದಿಗೆ ಸಹಾಯ ಮಾಡಬೇಕೆಂದು ಸುಳ್ಳಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಹಸಿರು ಬಣ್ಣದಿಂದ ತೋರಿಸಿರುವ ಜಾಗದಲ್ಲಿ ಇರುವ ಮನೆ ಮತ್ತು ನೇರಳೆ ಬಣ್ಣದ ಜಾಗದಲ್ಲಿ ಪ್ರತಿವಾದಿಗಳೆ ಸ್ವಾಧೀನ ಅನುಭದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಮನೆಯಲ್ಲಿ ಅವರು ವಾಸವಿದ್ದಾರೆ ಆದರೆ ನೇರಳೆ ಬಣ್ಣದಲ್ಲಿ ಇರುವ ಜಾಗದಲ್ಲಿ ಕಾಫಿ ಇದ್ದು ಅದನ್ನು ಯಾರು ಬಳೆದಿದ್ದಾರೆ ಎಂದು ಕಂಡು ಬಂದಿಲ್ಲ ಎನ್ನುತ್ತಾರೆ. ವಾದಿಯ ಪ್ರಭಾವಕ್ಕೆ ಒಳಗಾಗಿ ವರದಿಯನ್ನು ಸುಳ್ಳಾಗಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ವಾಸ್ತಾಂಶವನ್ನು ನನ್ನ ವರದಿಯಲ್ಲಿ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ನಾನು ಕಳೆದ 5 ವರ್ಷಗಳಿಂದ ಕೊಡಗು ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದೇನೆ. ನಮ್ಮ ಕಚೇರಿಗೆ ಕಂದಾಯ ನಿಗಧಿಗೆ ಕಡತಗಳು ಬರುತ್ತವೆ ಎಂದರೆ ಸರಿ. ಕಂದಾಯ ನಿಗಧಿಗೆ ಕೇಳಿದ ಜಾಗದಲ್ಲಿ ಕಾಫಿ ಬೆಳೆದಿರಬೇಕು ಎಂದರೆ ಸರಿ. ಕಂದಾಯ ನಿಗಧಿ ಪೂರ್ವದಲ್ಲಿ ಕಾಫಿ ಬೆಳೆದಿರುವ ಬಗ್ಗೆ ಸ್ಥಳ ತನಿಖೆಯನ್ನು ನಾನೇ ಮಾಡಬೇಕು ಎಂದರೆ ಸಾಕ್ಷಿ ನಮ್ಮ ಕಚೇರಿಯ ಸರ್ವೆಯರ್ ಗಳು ಸ್ಥಳ ತನಿಖೆ ಮಾಡುತ್ತಾರೆ ಎನ್ನುತ್ತಾರೆ. ಕಾಫಿ ಗಿಡದ ವಯಸ್ಸನ್ನು ನಿಮಗೆ ಹೇಳಲು ಸಾಧ್ಯನಾ ಎಂದರೆ ಅದರ ವಯಸ್ಸು ನನಗೆ ಕಂಡು ಹಿಡಿಯಲು ಸಾಧ್ಯವಿಲ್ಲ ಎನ್ನುತ್ತಾರೆ. ಪ್ರತಿವಾದಿಗಳು ಸಲ್ಲಿಸಿದ್ದ ಸೂಚನಾ ಪಟ್ಟಿಯಲ್ಲಿ ನೇರಳೆ ಬಣಣದಿಂದ ತೋರಿಸಿರುವ ಜಾಗದಲ್ಲಿ ಇರುವ ಕಾಫಿ ಗಿಡದ ವಯಸ್ಸನ್ನು ಹೇಳುವಂತೆ ಸೂಚಿಸಿದ್ದರು ವಾದಿಗೆ ಸಹಾಯ ಮಾಡಬೇಕೆಂಬ

ಉದ್ದೇಶದಿಂದ ಸದರಿ ಕಾಫಿ ಗಿಡದ ವಯಸ್ಸನ್ನು ಸ್ಪಷ್ಟಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಲ್ಲಿಸಿದ್ದ ಸೂಚನಾ ಪಟ್ಟಿಯಲ್ಲಿ ಹಸಿರು ಬಣ್ಣದಿಂದ ತೋರಿಸಿರುವ ಜಾಗದಲ್ಲಿ ಇರುವ ಮನೆಯ ವಯಸ್ಸನ್ನು ತಿಳಿಸಬೇಕೆಂದು ಸೂಚಿಸಿದ್ದರು ಆ ಮನೆಯ ವಯಸ್ಸನ್ನು ನನಗೆ ಹೇಳುವ ಸಾಮರ್ಥ್ಯ ಇದ್ದರು ಉದ್ದೇಶ ಪೂರಕವಾಗಿ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಲ್ಲಿಸಿದ್ದ ಸೂಚನಾ ಪಟ್ಟಿಯನ್ನು ನಾನು ಅಳತೆ ಕಾಲಕ್ಕೆ ಪಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ.1 ರ ವರದಿಯನ್ನು ನನ್ನ ಕಚೇರಿಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿ. ಅಳತೆ ಕಾರ್ಯ ನಿರ್ವಹಿಸಿದ ಎಷ್ಟು ದಿನಗಳ ನಂತರ ನಿಪಿ.1ರ ವರದಿಯನ್ನು ತಯಾರಿಸಲಾಗಿದೆ ಎಂದರೆ ಸಾಕ್ಷಿ ದಿಃ11.08.2025 ರಂದು ವರದಿಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಎನ್ನುತ್ತಾರೆ. ಹಸಿರು ಬಣ್ಣದಿಂದ ತೋರಿಸಿರುವ 2.50 ಸೆಂಟ್ಸ್ ಜಾಗದಲ್ಲಿ ಮನೆ ಕಟ್ಟಲಾಗಿದೆ ಮತ್ತು ನೇರಳೆ ಬಣ್ಣದಿಂದ ತೋರಿಸಿರುವ ಜಾಗದಲ್ಲಿ ವಾದಿ ಕಾಫಿ ಬೆಳೆದಿದ್ದಾರೆ ಎಂಬ ವಿಚಾರವನ್ನು ಪಿಟಿ ಶೀಟಿನಲ್ಲಿ ಪೂರಕವಾಗಿ ತೋರಿಸಿಲ್ಲ ಎಂದರೆ ಸಾಕ್ಷಿ ಪಿಟಿ ಶೀಟಿನಲ್ಲಿ ವಿಸ್ತೀರ್ಣವನ್ನು ಮಾತ್ರ ತೋರಿಸಲಾಗುತ್ತದೆ ಅದರಲ್ಲಿ ಉಳಿದ ವಿಚಾರವನ್ನು ತೋರಿಸುವುದಿಲ್ಲ ಎನ್ನುತ್ತಾರೆ. ವಾದಿಗೆ ಸಹಾಯ ಮಾಡಬೇಕೆಂಬ ಉದ್ದೇಶನಿಂದ ನಿಪಿ.1 ರ ವರದಿಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕಾನೂನು ಪ್ರಕಾರ ನಿಪಿ.1 ರ ವರದಿಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ನೇರಳೆ ಬಣ್ಣದಿಂದ ತೋರಿಸಿರುವ ಜಾಗದಲ್ಲಿ ವಾದಿಯವರು ಕಾಫಿ ಬೆಳೆದಿದ್ದಾರೆ ಎಂದು ಹೇಳಿರು ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಹಸಿರು ಬಣ್ಣ ಮತ್ತು ನೇರಳೆ ಬಣ್ಣದಿಂದ ತೋರಿಸಿರುವ ಜಾಗ ಪ್ರತಿವಾದಿಗಳು ಸ್ವಾಧೀನ

ಅನುಭವದಲ್ಲಿ ಇದ್ದಾರೆ ಮತ್ತು ಅವರೇ ಕಾಫಿ ಗಿಡಗಳನ್ನು ತಮ್ಮ ಮನೆಯ ಸುತ್ತು ಬೆಳೆದಿದ್ದಾರೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ.ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.